357

ಮೈಸೂರ ಗೆಜೆಟ್ಟ.

ನಂ. 39 ಸರ್ಕಾರದಿಂದ ಘಾಯಿಷ್ ಆದ್ದು. ಸನ 1876.

ಬೆಂಗಳೂರು, ಶನಿವಾರ, ಸಪ್ಟಂಬರ್ ತಾ॥ 30, ಸನ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 253—256

2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. .. 463—470

3ನೇ ಭಾಗ–ಇಂಡ್ಯ ಗವರ್ಮೆಂಟಿನ ದುಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ–ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖಿಲಾಸೇಯಾದ ಖೈದಿಗಳ ಚಪರೆ ಪಟ್ಟಿ. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 2ನೇ ಸಪ್ಟಂಬರ್ 1876.

ನಂ. 206.

ಬೆಂಗಳೂರು ಲಪ್ಕರ್ ಮ್ಯುನಿಸಿಪಾಲಿಟಿ ಬಗ್ಯಾಗಿ ವಿರ್ಪಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮ್ಮಿಷನರವರಿಂದ ಮಂಜೂರು ಮಾಡಲ್ಪಟ್ಟ ಸರ್ವರಿಗೂ ತಿಳಿಯುವ ಬಗ್ಯೆ ಘಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಪ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಜಡರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ಯೊಂದು ಹಂಗಾಮೀ ಜಪ್ಪರವನ್ನು ಕಟ್ಟಿಸುವ

ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ವೇಂದು ರೂಪಾಯಿಯನ್ನು ಕೊಡತಕ್ಕದ್ದು. ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸುಂ ಒಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಜಡರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಜಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದೆಸೇಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 219. ತಾರೀಖು 18ನೇ ಕಪ್ಟಂಬರ್ 1876.

ಬೆಂಗಳೂರು ಪಹರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜಾರೀಯಾಗತಕ್ಕ ಬಗ್ಗೆ, ಈ ಕೆಳಗ ಬರುವ ಬೈಲಾ ನಿಬಂಧನೆಗಳು ಮಂಜೂರ್ ಮಾಡಲ್ಪಟ್ಟವೆ;-

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾರ್ಫಿಯಾನೆ ಜಟ್ಟದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದರ್ಫ ಮಾಡಕೂಡದು, ಯಾ ದರ್ಫ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದರ್ಫ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದರ್ಫ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ, ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಒಂದು ಸಮಾಧಿಯನ್ನು ಕಟ್ಟು ಕೂಡದು, ಯಾ ಆಗೆಯ ಕೂಡದು, ಅಥವಾ ಕಟ್ಟಿಸ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಕಳ್ಳವಾಗಲಿ, ಪ್ರೆಸಿಡೆಂಟರ ಬರವಣಿಗೆ ಮೂಲಕವಾದ ಆಪ್ಪಣೇ ಹೊರತಾಗಿ ಖುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ; ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜರ್ಜ ಭೂಮಿಯೊಳಗಾಗಲಿ; ಯಾವ ಮುರ್ದೆಯನ್ನಾದರೂ ಮುರ್ದೆಯ ಒಂದು ಭಾಗವನ್ನಾದರೂ ಯಾವ ಮನುಷ್ಯನೂ ಜರ್ಜ ಮಾಡುವಲ್ಲಿ ಯಾ ಮಾಡಿಸುವಲ್ಲಿ ಆದಾಗಲಿ, ಆದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚಿಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29.—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜರ್ಜ ಭೂಮಿಯಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಒಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕ್ಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕ್ಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜರ್ಜ ಭೂಮಿಗೆ ಒಂದ ಅರುಘಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜರ್ಜ ಮಾಡಬೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದರ್ಫ ಯಾ ಜರ್ಜ ಭೂಮಿಯು ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೇ ಯಿಂದ ಆವರಣ ವಿಧ್ಯಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜರ್ಜ ಯಾ ದರ್ಫ ಭೂಮಿಗಳ ಟ್ರಸ್ಟೀಗಳಾಗಲಿ ಅಥವಾ ಅವುಗಳ ಚಾರ್ಜ್‌ವುಳ್ಳ ಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ

ಮಿಾರದ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಿೞಿಕ ಪೈಸಿ ಡೆಂಟರಿಗೆ ತೃಪ್ತಿಕರವಾಗಿ ಜರ್ಜ ಭೂಮಿಗಳಿಗಾಗಲಿ ದರ್ಖ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಸಲಿಕ್ಕೆ ಉಪೇಕ್ಷಿಸುವ ಪ್ರತಿ ದಿನಕ್ಕೂ ಯರಡು ರೂಪಾಯಿಗಳಿಗೆ ಮಿಾರದ ಬಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 230. ತಾರೀಖು 22ನೇ ಸಪ್ಟಂಬರ್ 1876.

ಸ್ಯ 1869ನೇ ಇಸವಿ ಯೇಪ್ರೆಲ್ 30ನೇ ಮುರ್ಕುಂ 83ನೇ ನಂಬರ್ ಬಾಬತು ಇಂಡ್ಯ ಗವರ್ಮೆಂಟ್ ಫಾರ್ಖ ಇಲಾಖೆಯವರ ಇಸ್ತಿಹಾರ್‌ನಾಮೆ ದೆಸೇಯಿಂದ ಮೈಸೂರು ಸೀಮೆಗೆ ಜಾರೀ ಮಾಡಲ್ಪಟ್ಟ 1868ನೇ ಇಸವಿ ಮುಂಬೈ ಆಕ್ಟಿನ 17ನೇ ಸೆಕ್ಷನ 2ನೇ ರೂಲ್ ನಿಬಂಧನೆಗಳನುಸಾರವಾಗಿ "ಮಿನಿಮಂಯೇರಿಯ" ಅಂದರೆ ಕಮ್ಮಿ ಬೀಜವರಿಯು ಈ ಕೆಳಗೆ ನಮೂದಿಸಲ್ಪಟ್ಟಿರುವ ಪ್ರಕಾರ ನಿಷ್ಕರ್ಷೆ ಮಾಡಲ್ಪಟ್ಟಿರುತ್ತೆ. ಸಿವಿಲ್ ಕೋರ್ಟಿನ, ವೊಂದು ಡಿಕ್ರಿ ಅಮಲ್‌ಜಾರೀ ಮಾಡುವಲ್ಲಿ ಸದರೀ ಮೇರೆ ಗೊತ್ತಾದ ಬೀಜವರಿ ಗಿಂತ ಕಮ್ಮಿಯಾಗಿ ವೊಂದು ಸರ್ವೆ ನಂಬರ್ ಜಮಿೀನಿಗೆ ಸಬ್ ಡಿವಿಜ್ಞ ಅಂದರೆ ವೊಳಭಾಗವು ಮಾಡಲ್ಪಡಕೂಡದು.

	ಯಕ—ರೆಗುಂಟೆ		ಯಕರೆ—ಗುಂಟೆ		ಯಕರೆ—ಗುಂಟೆ	
ಖುಷ್ಕಿ ಜಮಿೀನು	3	0	ತರೀ ಜಮಿೀನು	0	20	ಬಾಗಾಯಿತು ಜಮಿೀನ್	0	10

ನಂ. 231. ತಾರೀಖು 22ನೇ ಸೆಪ್ಟಂಬರ್ 1876.

ಇದರಿಂದ ಸರ್ವರಿಗೂ ತಿಳಿಯತಕ್ಕ ಬಗ್ಗೆ ಘಾಯಿಷ್ ಮಾಡುವದೇನಂದರೆ,—1876ನೇ ಇಸವೀ ಅಕ್ಟೋಬರ್ ಗುರ್ರೇ ತಾರೀಖು ಲಗಾಯಿತು ವ ಆತರುವಾಯ ಯುರೋಪ್ ವಗೈರೇ ಪ್ರದೇಶಗಳಿಂದ "ಇಂಡ್ಯ ಭಾಂಗಿ ಟಪ್ಪಾಲ್" ದ್ವಾರಾ, ಕವರ್‌ಗಳಲ್ಲಾಗಲಿ (ಪೆಟ್ಟಿಗೆ) ಕೇಸ್‌ಗಳಲ್ಲಾಗಲಿ, ಯಲ್ಲ ಕಡೆಯಲ್ಲಿಯೂ ಬಂದ್ ಮಾಡಲ್ಪಟ್ಟು ಬರುವ ಮತ್ತು ಮೈಸೂರು ಸೀಮೆಯ ಪೈಕಿ ದಿಗರಿಸ್ಥಳಕ್ಕೆ ಮೇಲ್ವಿಳಾಸ ಬರಿಯಲ್ಪಟ್ಟ ಭಾಂಗಿಗಳಿಗೆ ಸ್ಯ 1873ನೇ ಇಸವೀ ಮಾರ್ಚಿ 24ನೇ ಮುರ್ಕುಂ 321ನೇ ನಂಬರ್ ಚೀವ್ ಕಮ್ಮಿಷನ್ನರವರ ಇಸ್ತಿಹಾರಿನಲ್ಲಿ ಘಾಯಿಷ್ ಮಾಡಲ್ಪಟ್ಟ ರೂಲ್ಸ್ ಅನುಸರಿಸಿ ಭಾಂಗಿಗಳಿಗಾಗಿ ವಿಧಿಸಲ್ಪಟ್ಟ ಹಾಸಲ್ ಪೈಕಿ ಅರ್ಧ ಹಾಸಲು ಕಟ್ಟಲ್ಪಡುತ್ತಲ್ಲದೆ ಹರವೇಜಸ್ಟೀ ಪೋಸ್ಟ್ ಆಫೀಸ್‌ಗಳ ದ್ವಾರಾ ರವಾನೆ ಆಗತಕ್ಕ ಬಗ್ಗೆ ಈ ಸೀಮೆಯ ದಿಗರ್ ಸ್ಥಳಗಳಲ್ಲಿ ತೆಗದು ಕೊಳ್ಳಲ್ಪಡುವ ಭಾಂಗಿಗಳ ಮೇಲೂ ಅದೇ ದರದ ಪ್ರಕಾರ ಹಾಸಲ್ ಕಟ್ಟಲ್ಪಡುವದು.

ನಂ. 232. ತಾರೀಖು 25ನೇ ಸಪ್ಟಂಬರ್ 1876.

2ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಕೇಪ್ಟ್ ಮಾಲ್ಟಬಿಯವರು ತಾವು ಫರಲೋ ರಜಾದಿಂದ ವಾಪಸು ಬಂದ ಸಂಗತಿಯನ್ನು ಈರಿತು ಮುಂಬಾಯಿಯಲ್ಲಿ 1876ನೇ ಇಸವಿ ಸಪ್ಟಂಬರ್ 14ನೇ ತಾರೀಖಿನಲ್ಲು, ಬೆಂಗಳೂರಲ್ಲಿ 23ನೇ ತಾರೀಖಿನಲ್ಲು ರಿಪೋರ್ಟು ಮಾಡಿದರು.

ಕೆಪ್ಟ್ ಮಾಲ್ಟಬಿಯವರು ಹಂಗಾಮಿಯಾಗಿ ಬೆಂಗಳೂರು ಡಿಸ್ಟ್ರಿಕ್ಟಿಗೆ ದಾಖಲ್ಮಾಡಲ್ಪಟ್ಟಿರುತ್ತಾರೆ.

ನಂ. 233. ತಾರೀಖು 26ನೇ ಸಪ್ಟಂಬರ್ 1876.

ಸ್ಯ 1876ನೇ ಇಸವಿ ಸಪ್ಟಂಬರ್ 15ನೇ ಮುರ್ಕುಂ 222ನೇ ನಂಬರ್ ಇಸ್ತಿಹಾರ್ ಅನುಸರಿಸಿ, ರಜಾದಮೇಲೆ ಇರುವ ಮೇಸ್ಟರ್ ಲಾರೆನ್ಸ್‌ಯವರ ಗೈರ್ ಹಾಜರೀಯಲ್ಲಿ, ಬೆಂಗಳೂರು ಡಿಸ್ಟ್ರಿಕ್ಟ್ಕು 3ನೇ ನಂಬರ್ ಸರ್ಕಲ್ ಮುನಸೀಫ್ ಕೋರ್ಟು ಜಾರ್ಜ್ ಸಹಾ ತೆಗದುಕೊಳ್ಳುವಂತೆ ಯಲಹಂಕದ 2ನೇ ನಂಬರ್ ಸರ್ಕಲ್ ಮುನಸೀಫರನ್ನು ಚೀಫ್ ಕಮ್ಮಿಷನರ್ ಸಾಹೆಬರವರು ನೊಕರರ್ಕ್ಕಾಡುತ್ತಾರೆ.

ನಂ. 234. ತಾರೀಖು 27ನೇ ಸಪ್ಟಂಬರ್ 1876.

ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಪೂರ್ಣೈಯ್ಯನವರಿಗೆ 1876ನೇ ಇಸವಿ ಸಪ್ಟಂಬರ್ 15ನೇ ಮುರ್ಕುಂ ಲಗಾಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 235. ತಾರೀಖು 28ನೇ ಸಪ್ಟಂರ್ಬ 1876.

ಅಸಿಸ್ಟೆಂಟ್ ಕಮ್ಮಿಷನರ್ ಕೆಪ್ಟ್ ಮಾಲ್ಟ್‌ಬಿಯವರಿಗೆ 1872ನೇ ಇಸವಿ 10ನೇ ನಂಬರ್ ಆಕ್ಟಾದ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 19 ವ 28ನೇ ಸೆಕ್ಷನ್‌ಗಳ ನಿಬಂಧನೆಗಳನುಸರಿಸಿ ಫಸ್ಟ್ ಕ್ಲಾಸ್ ಮೇಜಸ್ಟ್ರೇಟ್ ಅಧಿಕಾರಗಳೂ, ಡಿಸ್ಟ್ರಿಕ್ಟಿನ ಪೈಕಿ ವೊಂದು ಡಿವಿಜ್ಞ ಮ್ಯಾಜಿಸ್ಟ್ರೇಟರ ಅಧಿಕಾರಗಳೂ, 29ನೇ ಸೆಕ್ಷನ್ನಲ್ಲಿ ನಮೂದಾಗಿರುವ ಅಧಿಕಾರಗಳೂ ಕೊಡಲ್ಪಟ್ಟಿವೆ.

ನಂ. 236. ತಾರೀಖು 28ನೇ ಕಪ್ಟಂಬರ್ 1876.

ಡಾಕ್ಟರ್ ಫಿಟ್‌ಜೆರಲ್ಡ್ ಯವರು ಮೈಸೂರು ವ ಸೀಡೆಡ್ ಡಿಸ್ಟ್ರಿಕ್ಟುಗಳ ಇಂಡ್ಯೆ ಮೆಡಿಕಲ್ ಇಲಾಖಾ ಡಿಪ್ಯೂಟಿ ಸರ್ಜ್ಜನರಲ್‌ಯವರ ಆಫಿಸ್ ಚಾರ್ಜನ್ನು ಡಾಕ್ಟರ್ ಆಸ್‌ವಾಲ್ಡ್ ಯವರಿಂದ 1876ನೇ ಇಸವಿ ಕಪ್ಟಂಬರ್ 27ನೇ ಮಕ್ಕಂ ಮಧ್ಯಾನ್ನಕ್ಕೆ ಪೂರ್ವ ತೆಗದುಕ್ಕೊಂಡರು.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 15ನೇ ಕಪ್ಟಂಬರ್ 1876.

ಈ ಕೆಳಗೆ ಬರುವ ಮ್ಯುನಿಸಿಪಲ್ ಬೈಲಾ ನಿಬಂಧನೆಯು ವೀರರಾಜೇಂದ್ರ ಪೇಟೆಯಲ್ಲಿ ಜಾರ್ತೀ ಇಸವಿಯಲ್ಲಿ ಮಾತ್ರ ಜಾರೀಯಲ್ಲಿರುವ ಹಾಗೆ ಇದನ್ನು ಚೀಪ್ ಕಮ್ಮಿಷನ್ನರ್ ಸಾಹೆಬರವರು ಮಂಜೂರು ಮಾಡಿರುತ್ತಾರೆ.

ಮ್ಯುನಿಸಿಪಲ್ ಸರಹದ್ದಿನ ವಳಕ್ಕೆ ವಿಕ್ರಯಕ್ಕಾಗಿ ತರಲ್ಪಡುವ ಪ್ರತಿ ಯೆತ್ತಿಗೂ, ಆಕ್ಕಿಗೂ, ಯಾ ಎಮ್ಮಿಕೋಣಕ್ಕೂ ಒಂದು ಆಣೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ."

T. CLARKE,
Offg. Secretary.

ಇಂಡ್ಯ ಗವರ್ಣಮೆಂಟಿನವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು.

ರೆವಿನ್ಯು ಅಗ್ರಿಕಲ್ಚರ್ ವ ಕಾಮರ್ಸ್ ಇಲಾಖಾ.

ಇಸ್ತಿಹಾರ್ ನಾಮೆಗಳು.

ಫಾರ್ಸ್ಟ್ ಇಲಾಖಾ.

ತಾರೀಖು 8ನೇ ಕಪ್ಟಂಬರ್ 1876 ಮೊಕ್ಕಾಂ ಸಿಂಲಾ.

ನಂ. 893—ಯಿದರಡಿ ಬರುವ ಆಫಿಸರ್‌ಗಳು 1876ನೇ ಇಸವಿ ಮೇ ಗುರ್ಯೇ ತಾರೀಖು ಲಗಾಯತು ಬಡತೀ ಮಾಡಲ್ಪಟ್ಟಿರುತ್ತಾರೆ. * * *

ಮೈಸೂರು ಫಾರೆಸ್ಟ್ಸ್ ಸಬ್ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೆಸ್ಟರ್ ಕಿಂಗ್‌ಯವರು 3ನೇ ಗ್ರೇಡ್ ಅಸಿಸ್ಟೆಂಟ್ ಕ್ವರ್ಸರ್ವೇಟರಾಗಿ ರತಕ್ಕದ್ದು.

ಕೊಡಗು ಫಾರೆಸ್ಟ್ಸ್ ಸಬ್ ಅಸಿಸ್ಟೆಂಟ್ ಕ್ವರ್ಸರ್ವೇಟರ್ ಮೈಸ್ಟರ್ ರಿಂಗ್‌ಯವರು 3ನೇ ಗ್ರೇಡ್ ಅಸಿಸ್ಟೆಂಟ್ ಕ್ವರ್ಸರ್ವೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

A. O. HUME,
Secretary to the Govt. of India.